# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀ ಡಿ. ಪರಮೇಶ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ ಇವರ ವಿರುದ್ದ ಶಿಸ್ತು ಕ್ರಮ.

*****

ಓದಲಾಗಿದೆ:-

1)ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ: ಕೃತೋಇ 25 ಕೃಪವಿ 2013, ದಿನಾಂಕ:18-11-2013

2)ಶ್ರೀ,ಡಿ ಪರಮೇಶ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಇವರ ಲಿಖಿತ ಹೇಳಿಕೆ ದಿನಾಂಕ:18-03-2014.

ಪ್ರಸ್ತಾವನೆ:-

ಮೇಲೆ ಕ್ರಮ ಸಂ. (1)ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದಲ್ಲಿ ಶ್ರೀ ಡಿ. ಪರಮೇಶ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ, ಇವರು 2010-11ನೇ ಸಾಲಿನಲ್ಲಿ ಭೂ-ಚೇತನ, ಎನ್.ಎಫ್.ಎಸ್.ಎಂ.ಡಿ.ಪಿ. ಕಾರ್ಯಕ್ರಮಗಳಡಿಯಲ್ಲಿ ರೈತರಿಗೆ ಶೇ.50ರ ಸಹಾಯಧನದಲ್ಲಿ ಜಿಪ್ಸಂ 615 ಎಂಟಿ ಮತ್ತು ಜಿಂಕ್ಸಲ್ಫೇಟ್ 33.7 ಎಂ.ಟಿ ಪ್ರಮಾಣದ ಕೃಷಿ ಪರಿಕರಗಳನ್ನು ಮೆ:ಎನ್.ಸಿ.ಐ ಬಯೋಟೆಕ್, ಬೆಂಗಳೂರು ಇವರಿಂದ ಸ್ವೀಕರಿಸಿದಂತೆ ಕಛೇರಿಯ ದಾಸ್ತಾನು ಪುಸ್ತಕದಲ್ಲಿ ಸುಳ್ಳಾಗಿ ದಾಖಲಿಸಿ ದೃಢೀಕರಿಸಿರುತ್ತಾರೆ. ಆದರೆ ದಾಸ್ತಾನುಗಳನ್ನು ಪಡೆದಿರುವುದಿಲ್ಲ. ನಂತರ ಸಂಬಂಧಪಟ್ಟ ಸಂಸ್ಥೆಯಿಂದ ಉದ್ರಿ ಬಿಲ್ ಪಡೆದು ಸರ್ಕಾರಿ ಸಹಾಯಧನವನ್ನು ಖಜಾನೆಯಿಂದ ಸೆಳೆದಿರುತ್ತಾರೆ. ಸದರಿ ಪರಿಕರಗಳನ್ನು ಅಧೀನದ ರೈತ ಸಂಪರ್ಕ ಕೇಂದ್ರಗಳಾದ ಹಾವೇರಿ ಗುತ್ತಲ ಹಾಗೂ ಕರ್ಜಗಿ ಕೇಂದ್ರದ ಪ್ರಭಾರ ಕೃಷಿ ಅಧಿಕಾರಿಗಳಾದ ಶ್ರೀ ಪಿ.ವ್ಹಿ.ಕಳ್ಳೇರ, ಶ್ರೀ ಬಿ.ಕೆ. ಕುಲಕರ್ಣಿ ಹಾಗೂ ಶ್ರೀ ಬಿ.ಎಸ್. ಕಲಾಲ್ ಇವರುಗಳೊಂದಿಗೆ ಶಾಮಿಲಾಗಿ ರೈತರಿಗೆ ವಿತರಿಸಿದೆ ಎಂದು ಖೊಟ್ಟಿ ದಾಖಲೆಗಳನ್ನು ಸೃಜಿಸಿ ಜಿಪ್ಸಂ ಗೊಬ್ಬರದ ಮೊತ್ತ ರೂ.9,79,451-50 ಹಾಗೂ ಜಿಂಕ್ ಸಲ್ಫೇಟ್ ಗೊಬ್ಬರದ ಮೊತ್ತ ರೂ.7,02,705/-ಗಳ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

ಹಾಗೂ ಸದರಿ ಅಧಿಕಾರಿಯವರನ್ನು ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಇವರು ದಿನಾಂಕ: 15-03-2012 ರಿಂದ 30-03-2012ರವರೆಗೆ ಪದವಿ ಪೂರ್ವ ಕಾಲೇಜುಗಳ ಪರೀಕ್ಷಾ ಕೇಂದ್ರದ ಅಧಿಕಾರಿ ಎಂದು ನೇಮಕಾತಿ ಮಾಡಿ ಆದೇಶಿಸಿದ್ದರೂ ಸಹ ಸದರಿ ಅಧಿಕಾರಿಯವರು ಜಿಲ್ಲಾಧಿಕಾರಿಯವರ ಆದೇಶವನ್ನು ಪಾಲಿಸದೆ ದಿನಾಂಕ: 16-03-2012ರಂದು ತಮ್ಮ ಪರವಾಗಿ

--2--

ಕಛೇರಿಯ ದ್ವಿತಿಯ ದರ್ಜೆ ಸಹಾಯಕರಾದ ಶ್ರೀ ಸಿ.ವಿ. ಹಿರೇಮಠ ಇವರನ್ನು ಪರೀಕ್ಷಾ ಉಸ್ತುವಾರಿ ನೋಡಿಕೊಳ್ಳಲು ತಿಳಿಸಿ ಜಿಲ್ಲಾಧಿಕಾರಿಯವರ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ. ಸದರಿ ದಿನಾಂಕಗಳಂದು ಕೇಂದ್ರಸ್ಥಾನದಲ್ಲಿ ಇರದೇ ಪರೀಕ್ಷಾ ಅಧಿಕಾರಿ ಎಂದು ಕಾರ್ಯನಿರ್ವಹಿಸದೇ ಮೇಲಾಧಿಕಾರಿಗಳ ಅನುಮತಿ ಪಡೆಯದೇ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ.ಈ ಆಪಾದನೆಗಳಿಗೆ ಸಂಬಂಧಿಸಿದಂತೆ ಅವರ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11 ರಡಿಯಲ್ಲಿ ಕಾರಣ ಕೇಳುವ ಪತ್ರವನ್ನು ಆಪಾದನಾಪಟ್ಟಿಯೊಂದಿಗೆ ಜಾರಿ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಡಿ. ಪರಮೇಶ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ ಇವರು ಲಿಖಿತ ಹೇಳಿಕೆ ಸಲ್ಲಿಸಿ, ತಮ್ಮ ಮೇಲಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ಸದರಿ ಅಧಿಕಾರಿಯವರು ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಮೇಲಿನ ಆರೋಪಗಳೊಂದಿಗೆ ತುಲನೆ ಮಾಡಿದಾಗ ಅವರ ಹೇಳಿಕೆಗಳಲ್ಲಿ ಒಪ್ಪಬಹುದಾದ ಅಂಶಗಳು ವ್ಯಕ್ತವಾಗಿರುವುದಿಲ್ಲ. ಆದ್ದರಿಂದ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಈ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಗುರಿಪಡಿಸಲು ನಿರ್ಧರಿಸಿದ್ದು, ಅದರಂತೆ ಶ್ರೀ. ಎನ್. ಪ್ರಹ್ಲಾದಾಚಾರ್ಯ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿಯ ವಿಚಾರಣಾಧಿಕಾರಿಯನ್ನಾಗಿ, ಮತ್ತು ಶ್ರೀ ಸತ್ಯ ನಾರಾಯಣ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿಯ ಮಂಡನಾಧಿಕಾರಿಯನ್ನಾಗಿ ನೇಮಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 25 ಕೃಪವಿ 2012**
**ಬೆಂಗಳೂರು, ದಿನಾಂಕ:02-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಡಿ. ಪರಮೇಶ ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ ಇವರು ಎಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿ ಇಲಾಖಾ ವಿಚಾರಣೆ ನಡೆಸಲು,

--3--

ಶ್ರೀ ಎನ್ ಪ್ರಹ್ಲಾದಾಚಾರ್ಯ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶ್ರೀ ಸತ್ಯ ನಾರಾಯಣ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿಯ ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಪ್ರಕರಣದ ವಿಚಾರಣೆಯನ್ನು ಮೂರು ತಿಂಗಳೊಳಗಾಗಿ ಮುಗಿಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಜಂಟಿ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ
4) ಶ್ರೀ ಎನ್ ಪ್ರಹ್ಲಾದಾಚಾರ್ಯ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶ್ರೀವತ್ಸ, ನಂ.43/13, ಕಾಮಾಕ್ಯ ಮೈನ್ ರೋಡ್, 4ನೇ ಕ್ರಾಸ್, 5ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು(560 085) (ರಿಜಿಸ್ಟ್ರ ಅಂಚೆ ಮೂಲಕ)
5) ಶ್ರೀ ಸತ್ಯನಾರಾಯಣ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
6) ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹಾವೇರಿ ಜಿಲ್ಲೆ.
7) ~~ಸರ್ಕಾರದ ಪ್ರಧಾನ~~ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ / ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.